**ಓ.ಎಸ್ ನಂಃ 18/2023**

**ಪಿಡಬ್ಲ್ಯೂ- 1**

**ದಿಃ 03-03-2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ B.V ವಕೀಲರಿಂದಃ**

ಅಂಗರತಾಳದಲ್ಲಿ ನಾನು 35 ವರ್ಷಗಳಿಂದ ವಾಸಮಾಡಿಕೊಂಡಿರುತ್ತೇನೆ. ಅಂಗರತಾಳದಲ್ಲಿ ನಮ್ಮ ಮಾವನ ಮನೆ ಇರುತ್ತದೆ. ಅವರಿಗೆ ಗಂಡುಮಕ್ಕಳು ಇರಲಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಸರ್ವೆ ನಂಬರ್ ಜಮೀನು ಇರುವುದಿಲ್ಲ. ನಾನು ಹಾಲಿ ಇರುವ ಅಂಗರತಾಳದ ವಿಳಾಸಕ್ಕೆ ಸಂಬಂಧಪಟ್ಟಂತೆ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಇರುತ್ತದೆ. ದಾವಾ ಸ್ವತ್ತುಗಳೆಲ್ಲವೂ ನನ್ನ ತಂದೆ ಶ್ರೀನಿವಾಸನಾಯ್ಕ ರವರಿಗೆ ಮಂಜೂರಾಗಿರುತ್ತದೆ. ನಮ್ಮ ತಂದೆಗೆ ಅದು ಪಿತ್ರಾರ್ಜಿತವಾದ ಆಸ್ತಿ ಆಗಿರುತ್ತದೆ. ಪಿತ್ರಾರ್ಜಿತ ಆಸ್ತಿ ಆಗಿರುವ ಬಗ್ಗೆ ದಾಖಲೆಪತ್ರಗಳನ್ನು ನೋಡಿರುತ್ತೇನೆ. ನಮ್ಮ ತಂದೆಯ ಜೀವಿತಾವಧಿಯಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಸ್ಥಾಪತ್ರ ಮಾಡಿಲ್ಲ. ನಮ್ಮ ತಂದೆಯವರು 2018 ರಲ್ಲಿ ತೀರಿಹೋಗಿರುತ್ತಾರೆ. ದಾವಾ ಸ್ವತ್ತುಗಳು ನಮ್ಮ ತಂದೆಯ ಹೆಸರಿನಲ್ಲಿಯೇ ಇದೆ. ದಿಃ06.05.2004 ರಂದು ನಮ್ಮ ತಂದೆಯವರು ಬದುಕಿದ್ದಾಗ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕುಖುಲಾಸೆ ಪತ್ರವನ್ನು ನಾನು ನಮ್ಮ ತಂದೆಯ ಹೆಸರಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಕ್ಕುಖುಲಾಸೆ ಪತ್ರವು ತೀರ್ಥಹಳ್ಳಿಯ ನೋಂದಕಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಆಗಿದೆ ಎಂದರೆ ಸರಿಯಲ್ಲ. ಹಕ್ಕುಖುಲಾಸೆ ಪತ್ರವನ್ನು ಬರೆದುಕೊಟ್ಟು ಅದರ ಬಾಬ್ತು ನಾನು ಹಣ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹಕ್ಕುಖುಲಾಸೆ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಕ್ಕುಖುಲಾಸೆ ಪತ್ರ ಬರೆದುಕೊಟ್ಟಿದ್ದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಹೋದ ನಂತರ ನನ್ನ ಮತ್ತು ನನ್ನ ಅಣ್ಣ ತಮ್ಮಂದಿರ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ನ್ಯಾಯಾಲಯ, ತೀರ್ಥಹಳ್ಳಿ ಯಲ್ಲಿ ಪ್ರಕರಣ

ನಡೆದಿತ್ತು ಎಂದರೆ ಸರಿ. ಆದರೆ ನಾನು ಒಪ್ಪಿಗೆ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಆ ಪ್ರಕರಣದಲ್ಲಿ ತಕರಾರು ಸಲ್ಲಿಸಿರಲಿಲ್ಲ. ತಹಶೀಲ್ದಾರ್ ನ್ಯಾಯಾಲಯದಲ್ಲಿ ನಡೆದಿರುವ ಪ್ರಕರಣವು ಮುಕ್ತಾಯ ಆಗಿರುತ್ತದೆ ಎಂದರೆ ಸರಿ. ತದನಂತರ ನಾವು ಈ ಕೇಸನ್ನು ಸಲ್ಲಿಸಿರುತ್ತೇವೆ ಎಂದು ಹೇಳುತ್ತಾರೆ.

ಸರೋಜ ಬಿನ್ ಶ್ರೀನಿವಾಸ ರವರು ನನ್ನ ಅಕ್ಕ. ಸರೋಜ ಮತ್ತು ಪ್ರತಿವಾದಿಗಳಿಗೆ ಸಂಬಂಧಿಸಿದಂತೆ ಜಂಟಿ ಖಾತೆ ಇರುತ್ತದೆ ಎಂದರೆ ಸಾಕ್ಷಿಯು ನಮ್ಮದು ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಸ್ವಾಧೀನವನ್ನು ನನ್ನ ತಮ್ಮಂದಿರು ಹೊಂದಿರುತ್ತಾರೆ. ನಾನು ಕುಟುಂಬದಿಂದ ಬೇರೆ ಹೋಗಿ 35 ವರ್ಷ ಆಗಿದೆ ಎಂದರೆ ಸರಿ. ಮೂಲತಃ ದಾವಾ ಸ್ವತ್ತಗಳು ತರಿ ಜಮೀನು ಎಂದರೆ ಸರಿ. ಅದನ್ನು ನಮ್ಮ ತಮ್ಮಂದಿರು ಸೇರಿ ಬಾಗಾಯ್ತು ಮಾಡಿರುತ್ತಾರೆ ಎಂದರೆ ಸರಿ. ಈಗ ನಾನು ವಾಸಮಾಡಿಕೊಂಡಿರುವ ಮನೆ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ನಾನು ವಾಸವಾಗಿರುವಂತಹ ಊರಿನಲ್ಲಿ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ವಿಚಾರಗಳನ್ನು ಸೇರಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬರೆದುಕೊಟ್ಟಂತಹ ಹಕ್ಕುಖುಲಾಸೆ ಪತ್ರದ ಆಧಾರದ ಮೇಲೆ ನನಗೆ ದಾವಾ ಆಸ್ತಿಯ ಮೇಲೆ ಹಕ್ಕು ಅಧಿಕಾರ ಯಾವುದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಹಾಲಿ ಇರುವ ಸ್ಥಳದಲ್ಲಿ ಪಡಿತರ ಚೀಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸಲ್ಲಿಸುವ ಪೂರ್ವದಲ್ಲಿ ನಮ್ಮ ವಕೀಲರ ಮುಖಾಂತರ ನಾನು ನೋಟೀಸು ಕಳುಹಿಸಿದ್ದೆ ಎಂದರೆ ಸರಿ. ನಾನು ಕೊಟ್ಟಂತಹ ನೋಟೀಸಿಗೆ ವಕೀಲರಿಗೆ ಉತ್ತರ ಕೊಟ್ಟಿದ್ದಾರೆ ಎಂದರೆ ಸರಿ. ಪ್ರತ್ಯುತ್ತರದಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಎಂದು ನಾನು ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಪ್ರತ್ಯುತ್ತರದ ಕಾಪಿ ನನ್ನ ಬಳಿ ಇದೆ ಎಂದರೆ ಸರಿ. ಸದರಿ ಪ್ರತ್ಯುತ್ತರದಲ್ಲಿ ನಾನು ನಮ್ಮ ತಂದೆಯವರ ಹೆಸರಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವ ವಿಚಾರ ಹೇಳಿದೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗಳಿಗೆ ಕೊಟ್ಟಂತಹ ನೋಟೀಸಿನ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿಸಿ ಸರಿಯಿದೆ.

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**